ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 344/2013

ಪಿ. ಡಬ್ಲ್ಯು: 14
ಸಿ. ಡಬ್ಲ್ಯು: 01

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರವಿ |
| ತಂದೆ/ಪತಿಯ ಹೆಸರು | ಃ | ಪಾಪಶೆಟ್ಟಿ |
| ವಯಸ್ಸು | ಃ | 47 ವರ್ಷ |
| ವೃತ್ತಿ | ಃ | ಪೋಲೀಸ್ ಮುಖ್ಯ ಪೇದೆ, ಅರಕೆರೆ ಪೋಲೀಸ್ ಠಾಣೆ |
| ವಾಸ | ಃ | ಕೆ.ಆರ್.ಎಸ್ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 10.10.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು 2013 ರಿಂದ 2016 ವರೆಗೆ ಅರಕೆರೆ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 15.08.2013 ರಂದು ಸಂಜೆ 04.30 ಸಮಯದಲ್ಲಿ ಪಿ.ಎಸ್.ಐ. ರವರಿಗೆ ಮಾಹಿತಿ ಬಂದ ಮೇರೆಗೆ ಗಾಮನಹಳ್ಳಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಪಿ.ಎಸ್.ಐ. ರವರು ನಮ್ಮನ್ನು, ಹೆಚ್.ಸಿ.98, ಪಿ.ಸಿ.102 ಅನಂದ್ ಮತ್ತು ಪಿ.ಸಿ.725 ಶ್ರೀನಿವಾಸ ರವರುಗಳನ್ನು ಹಾಗೂ ಪಂಚಾಯಿತಿದಾರರಾದ ಚನ್ನೇಗೌಡ ಹಾಗೂ ಪ್ರಕಾಶ್ ಎನ್ನುವವರನ್ನು ಕರೆದುಕೊಂಡು ಗಾಮನಹಳ್ಳಿಗೆ ಸಂಜೆ 05.15 ಗಂಟೆಗೆ ಹೋಗಿರುತ್ತೇವೆ.

ಅಲ್ಲಿ ಚೆನ್ನಪ್ಪ ನವರ ಅಂಗಡಿಯಿಂದ ಸ್ವಲ್ಪ ದೂರದಲ್ಲಿ ನಮ್ಮ ಇಲಾಖಾ ಜೀಪ್ ನಿಲ್ಲಿಸಿ ನಂತರ ಸಿಬ್ಬಂದಿಗಳಾದ ನಾವುಗಳು ಅಂಗಡಿ ಹತ್ತಿರ ಹೋಗಿ ನೋಡಲಾಗಿ ಅಲ್ಲಿ ಇಬ್ಬರು ವ್ಯಕ್ತಿಗಳು ಸೂಪರ್ ಜಾಕ್ ಫೈನ್ ಬ್ರಾಂದಿಯನ್ನು ಕುಡಿಯುತ್ತಿದ್ದು ನಮ್ಮನ್ನು ನೋಡಿ ಅಲ್ಲಿಂದ ಓಡಿಹೋಗಿರುತ್ತಾರೆ. ನಂತರ ನಾವು ಅಲ್ಲಿದ್ದ ಖಾಲಿ ಬಾಟಲುಗಳು ಹಾಗೂ ಅರ್ಧ ಉಪಯೋಗಿಸಿದ್ದ ಸೂಪರ್ ಜಾಕ್ ಫೈನ್ ಬ್ರಾಂದಿ ಬಾಟಲುಗಳನ್ನು ತೆಗೆದುಕೊಂಡು ಹೋಗಿ ಪಿ.ಎಸ್.ಐ. ರವರಿಗೆ ತೋರಿಸಿರುತ್ತೇವೆ.

ನಂತರ ಪಿ.ಎಸ್.ಐ. ರವರ ಜೊತೆ ಅಂಗಡಿ ಚೆನ್ನಪ್ಪನವರನ್ನು ವಿಚಾರಣೆ ಮಾಡಿ ಈ ರೀತಿ ಮಾಡುವುದು ತಪ್ಪೆಂದು ಪಿ.ಎಸ್.ಐ. ರವರು ತಿಳಿಸಿರುತ್ತಾರೆ. ಆನಂತರ ಅಂಗಡಿ ಮೇಲೆ ಇದ್ದ

ಒಂದು ರಟ್ಟಿನ ಬಾಕ್ಸ್ ಅನ್ನು ಸೂಪರ್ ಜಾಕ್ ಫೈನ್ ಬ್ರಾಂದಿಯನ್ನು ಕೆಳಗಡೆ ಇಳಿಸಿಕೊಂಡು ಚೆನ್ನಪ್ಪನವರನ್ನು ವಿಚಾರಣೆ ಮಾಡಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವುದು ತಪ್ಪೆಂದು ತಿಳಿಸಿರುತ್ತೇವೆ. ನಂತರ ಪಂಚಾಯಿತಿದಾರರ ಸಮಕ್ಷಮ ಮದ್ಯದ ಬಾಟಲು ಮತ್ತು ಚೆನ್ನಪ್ಪನವರನ್ನು ಮಹಜರ್ ಮಾಡಿ ವಶಕ್ಕೆ ತೆಗೆದುಕೊಂಡು ಸಂಜೆ 05.30-06.00 ವರೆಗೆ ಮಹಜರ್ ಕ್ರಮ ಜರುಗಿಸಿ ಚೆನ್ನಪ್ಪನನ್ನು ಜೀಪ್ ನಲ್ಲಿ ಕೂರಿಸಿಕೊಂಡು ಬರುವಾಗ ಗ್ರಾಮಸ್ಥರಾದ ಆರೋಪಿಗಳು ಜೀಪ್ ನಿಂದ ಚೆನ್ನಪ್ಪನನ್ನು ಇಳಿಸಿ ಮತ್ತು ಅಮಾನತ್ತು ಪಡಿಸಿಕೊಂಡ ಮದ್ಯದ ಬಾಟಲಿಗಳನ್ನು ವಾಪಸ್ಸು ಕೊಡಿ ಇಲ್ಲವಾದರೆ ಜೀಪ್ ಗೆ ಬೆಂಕಿ ಹಾಕುತ್ತೇವೆ ಬೇರೆ ಕಡೆ ಸೀಜ್ ಮಾಡಲು ನಿಮಗೆ ಸಾಧ್ಯವಾಗಲಿಲ್ಲವಾ ಎಂದು ಬಾಯಿಗೆ ಬಂದಂತೆ ಬೈದು ಬೊಳಿ ಮಕ್ಕಳಾ, ಸೂಳೆ ಮಕ್ಕಳಾ ಎಂದು ಬೈದು ಸರ್ಕಾರಿ ಜೀಪ್ ಅನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿ ಜೀಪ್ ನಿಂದ ಚಾಲಕನನ್ನು ಕೆಳಗೆ ಎಳೆದು ಹಾಕಿರುತ್ತಾರೆ.

ನಂತರ ಜೀಪ್ ನಲ್ಲಿದ್ದ ಚೆನ್ನಪ್ಪ ಮತ್ತು ಮದ್ಯ ತುಂಬಿದ ಬ್ಯಾಕ್ಸ್ ನನ್ನು ತೆಗೆದುಕೊಳ್ಳಲು ಪ್ರಯತ್ನಿಸಿ ಚೆನ್ನಪ್ಪನನ್ನು ಬಲವಂತವಾಗಿ ಕೆಳಗೆ ಇಳಿಸಿಕೊಂಡಿರುತ್ತಾರೆ. ನಂತರ ಚೆನ್ನಪ್ಪನವರು ತನ್ನ ಅಂಗಡಿಯಲ್ಲಿದ್ದ ಬಟ್ಟನ್ನು ತೆಗೆದುಕೊಂಡು ಹೆಚ್.ಸಿ.98 ಚೌಡಯ್ಯನವರ ಹಣೆಯ ಹತ್ತಿರ ಹೊಡೆದಿರುತ್ತಾರೆ. ನಂತರ ನಮ್ಮನ್ನು ನೂಕಾಡಿ ಕೆಳಗೆ ತಳ್ಳಿ ಬಟ್ಟೆಗಳನ್ನು ಹರಿದು ಹಾಕಿರುತ್ತಾರೆ. ನಂತರ ನಮ್ಮ ಮುಖ, ಮೈ ಕೈಗೆ ಹೊಡೆದಿರುತ್ತಾರೆ. ನಂತರ ಪಿ.ಎಸ್.ಐ. ರವರಿಗೆ ಕತ್ತಿನ ಪಟ್ಟಿ ಹಿಡಿದು ಎಳೆದಾಡಿರುತ್ತಾರೆ. ಆಗ ಪಿ.ಎಸ್.ಐ. ರವರು ಈ ರೀತಿ ಮಾಡುವುದು ಸರಿಯಲ್ಲ ಎಂದು ತಿಳಿಸಿದರು ಕೂಡ ಎಲ್ಲಾರು ಸೇರಿ ಜೀಪ್ ಗೆ ಬೆಂಕಿ ಹಚ್ಚೋಣ ಎಂದು ಕೂಗಾಡಿರುತ್ತಾರೆ. ನಂತರ ನಾವು ಜೀಪ್ ತೆಗೆದುಕೊಂಡು ವಾಪಸ್ಸು ಠಾಣೆಗೆ ಬಂದಿರುತ್ತೇವೆ. ಗಲಾಟೆ ಸಮಯದಲ್ಲಿ ನಮ್ಮ ಸಿಬ್ಬಂದಿ ಆನಂದ್ ರವರಿಗೆ ಆತ ತೊಟ್ಟಿದ್ದ ಸಮವಸ್ತ್ರವನ್ನು ಹಿಡಿದು ಎಳೆದಾಡಿ ಹರಿದುಹಾಕಿರುತ್ತಾರೆ.

ಗಲಾಟೆ ಸಮಯದಲ್ಲಿ ವಶಪಡಿಸಿಕೊಂಡಿದ್ದ ಮದ್ಯ ತುಂಬಿದ ಬಾಟಲಿಗಳನ್ನು ಅಮಾನತ್ತು ಪಡಿಸಿಕೊಂಡು ಠಾಣೆಗೆ ತಂದಿರುತ್ತೇವೆ. ನಮ್ಮ ಮೇಲೆ ಗಲಾಟೆ ಮಾಡಿ ಹಲ್ಲೆ ನಡೆಯಿಸಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಕೃತ್ಯ ನಡೆದ ದಿನ ಮಹಜರ್ ಬರೆದಿದ್ದು ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿ ಮಹಜರ್ ಹಾಗೂ ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಜರ್ ಅನ್ನು ನಿಪಿ.1 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ. 1-ಎ ಎಂದು ಗುರುತಿಸಲಾಯಿತು. ನಾವು ವಶಪಡಿಸಿಕೊಂಡಿದ್ದ ಮು.ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು

ನ್ಯಾಯಾಲಯದ ಮುಂದಿರುವ 42 ಮದ್ಯ ತುಂಬಿದ ಬಾಟಲಿಗಳನ್ನು ಹಾಗೂ ಕಬ್ಬಿಣದ ಬಟ್ಟು ಹಾಗೂ 2 ಪ್ಲಾಸ್ಟಿಕ್ ಲೋಟಗಳು, 1 ಯೂನಿಫಾರಂ, ಒಂದು ಶರ್ಟ್ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾಲು.1 ರಿಂದ 5 ಎಂದು ಗುರುತಿಸಲಾಯಿತು.

ಮಹಜರ್ ಮಾಡುವ ಕಾಲಕ್ಕೆ ಭಾವಚಿತ್ರಗಳನ್ನು ತೆಗೆಯಲಾಯಿತು. ಸಾಕ್ಷಿಯು 2 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.2 ಮತ್ತು ನಿಪಿ.3 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ</u>**

ಆರೋಪಿ ಪರ ವಕೀಲರು ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.